ಕೈಯಲ್ಲಿ ಎ.ಕೆ. 47 ಹಿಡಿದು ಮರಗಳಿಂದ ಆವೃತ್ತವಾದ ಮಟ್ಟಸ ಜಾಗದ ಮೈದಾನಕ್ಕೆ ನೂರು ಸುತ್ತು ಬರಬೇಕು. ಆ ಬಳಿಕ ಮೈದಾನದುದ್ದಕ್ಕೆ ಹತ್ತು ಸಲ ತೆವಳಬೇಕು. ಅದಾಗಿ ಆ ಭಾರಸಹಿತ ಸರಸರನೆ ಮರ ಏರಬೇಕು. ಸುಮಾರು ಮೂವತ್ತು – ನಲವತ್ತು ಅಡಿ ಎತ್ತರದಿಂದ ಕೆಳಕ್ಕೆ ಹಾರಿ ನೇರವಾಗಿ ಲ್ಯಾಂಡ್ ಆಗಬೇಕು. ಅದೆಲ್ಲಾ ಮುಗಿದ ಮೇಲೆ ಮೂರು ಚಪಾತಿ ಮತ್ತು ಸಬ್‌ಜೀ. ಸಿಕ್ಕಿಬಿದ್ದರೆ ಜೈಲಿನ ಊಟ ಅಭ್ಯಾಸವಾಗಲಿ ಎಂದು ಈ ವ್ಯವಸ್ಥೆ. ಇದೆಲ್ಲಾ ಆಗಿ ಮಧ್ಯಾಹ್ನ ಮೂರರವರೆಗೆ ವಿಶ್ರಾಂತಿ. ಆ ಬಳಿಕ ಎ.ಕೆ.47ನಿಂದ ಗುರಿಗೆ ಗುಂಡು ಹೊಡೆಯುವ ತರಬೇತಿ. ಅದಾಗಿ ಭುಜದ ಮೇಲೆ ವೆಪನ್ ಇಟ್ಟು ರಾಕೆಟ್ಟು ಉಡಾಯಿಸುವ ಶಿಕ್ಷಣ. ಕಾಡಲ್ಲಿ ಬೇಗ ಕತ್ತಲೆಯಾಗುತ್ತದೆ. ಹಾಗಾಗಿ ಮಧ್ಯಾಹ್ನ ಅನಂತರ ಎರಡೇ ಗಂಟೆ ತರಬೇತಿ.”

“ನಿಮ್ಮ ಸ್ನಾನ ಗೀನ ಎಲ್ಲಿ? ನೀವೆಲ್ಲಾ ಎಲ್ಲಿ ಮಲಗುತ್ತಿದ್ದಿರಿ?”

“ನಿಮಗೆ ಜಾಫ್ನಾ ಕಾಡಿನ ನಿಬಿಡತೆ ಗೊತ್ತಿರಲು ಸಾಧ್ಯವಿಲ್ಲ ಸ್ವಾಮಿ. ನಮ್ಮ ತರಬೇತಿ ಪ್ರದೇಶದಿಂದ ಒಂದು ಕಿ.ಮೀ. ದೂರದಲ್ಲಿ ನಲವತ್ತು ಮೀಟರ್ ಅಂತರದಲ್ಲಿ ಎರಡು ಜಲಪಾತಗಳಿದ್ದವು. ಎಂತಹ ಶುದ್ಧ ನೀರು! ಅಲ್ಲಿ ಶುದ್ಧವಾದ ಗಾಳಿಯೂ ಇತ್ತು. ನಮ್ಮ ಹಕ್ಕಿಗಾಗಿ ಹೋರಾಡುತ್ತಿದ್ದೇವೆ ಎಂಬ ಆತ್ಮವಿಶ್ವಾಸ ನಮ್ಮದಾಗಿತ್ತು. ಆದರೆ, ಸ್ವತಂತ್ರವಾದ ನಮ್ಮದೇ ನಾಡಲ್ಲಿ ಜೀವನ ನಡೆಸುವ ಸೌಭಾಗ್ಯವನ್ನು ಆ ಆಂಡವನ್ ನನ್ನ ಹಣೆಯಲ್ಲಿ ಬರೆದಿರಲಿಲ್ಲ.”

ನಾನು ಗಾಬರಿಯಿಂದ ಕೇಳಿದೆ. “ಏನಾಯಿತು?”

“ಅಂದು ಪೊಟ್ಟಿ ಅಮ್ಮಾನ್ ಕ್ಯಾಂಪಲ್ಲಿ ಎಲ್ಲಿಗೆ ಹೋಗಿದ್ದನೋ? ಅವನೊಂದಿಗಿದ್ದ ಅರವತ್ತು ಜನರು ವೇಲುಪಿಳ್ಳೈಯನ್ನು ಕಾಣಲು ಹೋಗಿರಬೇಕು. ನಾವು ಬೆಳಗ್ಗಿನ ಹೊತ್ತು ಎ.ಕೆ. 47 ಹಿಡಿದು ತೆವಳುತ್ತಿದ್ದೆವು. ಅವು ಲೋಡ್ ಆಗಿರಲಿಲ್ಲ. ಆಗ ಕೇಳಿಸಿತು ಗಟ್ಟಿ ದನಿ, “ನಿಮ್ಮ ಬಂದೂಕು ಕೆಳಗೆ ಹಾಕಿ. ಕೈಗಳನ್ನು ಎತ್ತಿ ಎದ್ದು ನಿಲ್ಲಿ. ನಿಮ್ಮನ್ನು ನಾಲ್ಕು ಕಡೆಗಳಿಂದಲೂ ಸುತ್ತುವರಿಯಲಾಗಿದೆ. ಬೆನ್ನಿನತ್ತ ಕೈ ಹೋದರೆ ಗುಂಡುಗಳು ನಿಮ್ಮ ಎದೆಯನ್ನು ಸೀಳಲಿವೆ.”

ನಾವು ಎದ್ದು ನಿಂತೆವು. ನಮ್ಮನ್ನು ಸುತ್ತುವರಿದ ಸೈನಿಕರು ನಮ್ಮ ಕೈಗಳನ್ನು ಬೆನ್ನ ಹಿಂದೆ ಕಟ್ಟಿ ಮೂರು ಸಾಲಲ್ಲಿ ನಿಲ್ಲಿಸಿದರು.

“ನಮ್ಮನ್ನು ಯಾರೆಂದುಕೊಂಡಿರಿ? ನಾವು ಇಂಡಿಯನ್ ಪೀಸ್ ಕೀಪಿಂಗ್ ಆರ್ಮಿಯವರು. ನೀವು ನಮ್ಮವರು. ನಾವು ಶಾಂತಿ ಸ್ಥಾಪಿಸಲು ಬಂದವರು. ಯಾರನ್ನೂ ಕೊಲ್ಲಲಿಕ್ಕೆ ಅಲ್ಲ.”

ಅವರು ಜಾಫ್ನಾದಲ್ಲಿ ಹಾಗೆ ಹೇಳಿ ತಮಿಳರನ್ನು ನಂಬಿಸಿದ್ದರು. ಕಾಡಾಡಿ ಜೀವನ ಸಾಕಾಗಿ ಹೋಗಿದ್ದ ಯಾರೋ ಒಬ್ಬ ಈಳಂ ಸದಸ್ಯ ಇನ್ನು ಮುಂದೆ ಗೌರವದ ಬದುಕು ತನ್ನದಾಗುತ್ತದೆಂದು ನಂಬಿ ಅವರಿಗೆ ಪೊಟ್ಟಿ ಅಮ್ಮಾನ್ ಇರುವ ಸ್ಥಳದ ಬಗ್ಗೆ ಗುಟ್ಟು ಬಿಟ್ಟುಕೊಟ್ಟಿದ್ದ. ಇದನ್ನು ಕೇಳಿ ನನ್ನ ಜಂಘಾಬಲವೇ ಉಡುಗಿ ಹೋಯಿತು. ‘‘ಈ ಭಾರತೀಯ ಸೇನೆಗೆ ಯಾರಾದರೂ ವೇಲುಪಿಳ್ಳೈ ಇರುವ ಜಾಗ ಗೊತ್ತಿದ್ದವರು ಅದನ್ನು ಹೇಳಿ ಬಿಟ್ಟರೆ ಸ್ವತಂತ್ರ ಈಳಂಗಾಗಿ ನಡೆಯುವ ಹೋರಾಟ ಪರಿಸಮಾಪ್ತಿಯಾಗುತ್ತದೆ” ಎಂದರು ಅವರು.

ನಾನು ನನ್ನ ಹತ್ತಿರವಿದ್ದ ಭಾರತೀಯ ಸೈನಿಕನನ್ನು ಕೇಳಿದೆ. ‘‘ನಮ್ಮನ್ನು ಕರೆದುಕೊಂಡು ಹೋಗಿ ಕೊಲ್ಲುತ್ತೀರಾ?” ಅವನು ಗಂಭೀರ ದನಿಯಲ್ಲೆಂದ. “ನಾವು ಯಾರನ್ನೂ ಕೊಲ್ಲುವುದಿಲ್ಲ. ನಿಮ್ಮನ್ನೆಲ್ಲಾ ಭಾರತಕ್ಕೆ ಕಳುಹಿಸಿಕೊಡುತ್ತೇವೆ. ವೇಲುಪಿಳ್ಳೈ ಪ್ರಭಾಕರನ್ ಜೊತೆ ಶಾಂತಿ ಸಂಧಾನಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮವರು ನಮ್ಮವರನ್ನು ಕೊಲ್ಲುವುದುಂಟಾ?”

“ನಿಮ್ಮನ್ನು ಮತ್ತೆ ಭಾರತಕ್ಕೆ ಕಳುಹಿಸಿ ಕೊಟ್ರಾ ಅಜ್ಜ?”

“ನಮ್ಮ ವಿವರ ಕೇಳಿದರು. ನಾನೂ ಸೇರಿದಂತೆ ನಾವೆಲ್ಲಾ ಭಾರತದಿಂದ ಕಳ್ಳತನದಿಂದ